ದೊಡ್ಡ ಬೆಳಕಾಗಿದೆ. ಬೆಳಗಾದ ಭಯದಲ್ಲಿ ಜಿರಲೆಗಳು ರಾತ್ರಿ ತೊಳೆಯದೆ ಬಿಟ್ಟ ಗಂಜಿ ಪಾತ್ರೆಯಿಂದ ಫೇರಿ ಹೊರಟಿದ್ದವು. ಹೊರಗೆ ಟ್ಯಾಂಕರಿನ ನೀರು ತುಂಬಿಸಿಕೊಳ್ಳುತ್ತ ಕೂಗಾಡುವ ಸ್ಲಂನ ಹೆಂಗಸರ ಕೋಲಾಹಲ. ಇದು ಮಾತ್ರ ನಿಜ. ತಾನು ಮಲಗಿರುವುದು ಸ್ಲಂನ ಗುಡಿಸಲಿನಲ್ಲಿಯೆ...

## 2

ಆತ ಹೆಸರಾಂತ ದೇವಸ್ಥಾನದ ಅರ್ಚಕರ ಒಬ್ಬನೇ ಮಗ. ಅಪ್ಪನೊಂದಿಗೆ ನಿತ್ಯ ದೇವಸ್ಥಾನಕ್ಕೆ ಹೋದರೂ ಅಲ್ಲಿ ದೇವರ ಪೂಜೆಗಿಂತ ಚಂದ್ರಶಾಲೆಯ ಮೂಲೆಯೊಂದರಲ್ಲಿ ನಡೆಯುವ ಸಂಗೀತ ಪಾಠಶಾಲೆಯತ್ತಲೆ ಅವನ ಸಕಲ ಗಮನ. ಕಿವಿಯ ಮೇಲೆ ಬೀಳುತ್ತಿದ್ದುದು ಅಪ್ಪ ರಾಗವಾಗಿ ಪಠಿಸುತ್ತಿದ್ದ ರುದ್ರವಲ್ಲ, ಸಂಗೀತ ಗುರುಗಳು ಹೇಳಿಕೊಡುತ್ತಿದ್ದ ಸರಿಗಮಪ..ದ ಧ್ವನಿ. ನಿತ್ಯ ಸ್ನಾನ ಮಾಡುವಾಗ, ಮಡಿ ಉಡುವಾಗ ಮತ್ತೆ ಸಂಧ್ಯಾವಂದನೆ ಮಾಡುವಾಗಲು ಗಾಯತ್ರಿ ಮಂತ್ರದ ಜೊತೆಗೇ ಗುಂಯ್‌ಗುಡುತ್ತಿದ್ದುದು ಸ್ವರಗಳು, ಅಪ್ಪನ ಒತ್ತಾಯದ ಮೇರೆಗೆ ಒಂದಿಷ್ಟು ಕರ್ಮಾಂಗಗಳನ್ನೇನೊ ಕಲಿತದ್ದಾಯಿತು. 'ನಮಗೆ ಜೀವನಾಧಾರ ಅನ್ನೋದು ಪುರೋಹಿತ ವೃತ್ತಿಯಷ್ಟೆ ಮಗನೆ, ಈ ಸಂಗೀತ ಅನ್ನೋದು ಅಷ್ಟಾಂಗ ಸೇವೆಗಳಲ್ಲಿ ಸಾವಗಾನವನ್ನೊ, ಸಂಗೀತವನ್ನೋ ಹೇಳುವುದಕ್ಕಷ್ಟೆ ಸೀಮಿತ. ಅದು ನಮಗೆ ಹೊಟ್ಟೆಗೆ ಕೊಡೋದಿಲ್ಲ' ಅಪ್ಪ ಹೇಳುತ್ತಿದ್ದ.

ಬದಲಾದ ಸಾಮಾಜಿಕ ಸ್ಥಿತ್ಯಂತರದಲ್ಲಿ ದೇವಸ್ಥಾನಕ್ಕೆ ದಲಿತ ಪೂಜಾರಿಯನ್ನ ನೇಮಿಸಿ ಅಪ್ಪನನ್ನ ತೆಗೆದುಹಾಕಿದ್ದೇ ನೆವವಾಗಿ ಅಪ್ಪ ಹಾಸಿಗೆ ಹಿಡಿದವನು ಮತ್ತೆ ಮೇಲೇಳಲಿಲ್ಲ. ಹೋಗುವ ಮುನ್ನ ಮಗನಿಗೊಂದು ಮದುವೆ ಮಾಡಿ ಹೋಗಿದ್ದ. ಮಡದಿಯಾಗಿ ಬಂದವಳು, ಸಾಕಷ್ಟು ಆಢ್ಯ ಮನೆತನದ ಹುಡುಗಿ. ನೀಳವಾದ ಕೈ ಕಾಲುಗಳು, ಸೊಂಟ ಸಣ್ಣದಾಗಿದ್ದರಿಂದ ಏನೂ ಇಲ್ಲದೆಯೂ ಇದ್ದಂತೆ ಕಾಣುವ ಪೃಷ್ಠಗಳು, ಒಡಕಲಾಗಿದ್ದರೂ ಆಸೆ ಹುಟ್ಟಿಸುವ ನವಿಲುಗೊರಳು, ಪುಟ್ಟದಾಗಿ ಮಿದುವಾಗಿದ್ದ ಮೊಲೆಗಳು, ತುಸು ದಪ್ಪ ಅನ್ನಿಸುವ ತುಟಿಗಳ ನಡುವೆ ಚಿಕ್ಕ ಬಾಯಿ,

